ದಿನಾಂಕ 29-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ವಾದಿಗಳ ಪರ ಶ್ರೀ ಆರ್.ವಿ.ಡಬ್ಲ್ಯೂ ವಕೀಲರಿಂದಃ</u>**

1. ಈ ದಾವೆಯನ್ನು ಸೋಮಣ್ಣ ಸಲ್ಲಿಸಿರುತ್ತಾರೆ. ಆತ ನನ್ನ ಅಣ್ಣ. ನನ್ನ ತಂದೆ ಮೃತ್ಯು ಪತ್ರವನ್ನು ಬರೆದಿರುತ್ತಾರೆಂದು ಈ ದಾವೆಯನ್ನು ಸಲ್ಲಿಸಿರುತ್ತಾರೆ. ಸ ನಂಃ 150/1 ರ ಜಮೀನಿಗೆ ಸಂಬಂಧಿಸಿದಂತೆ ಮೃತ್ಯು ಪತ್ರ ಮಾಡಲಾಗಿದೆ. ಸದರಿ ಜಮೀನು 4 ಎಕರೆ 2 ಗುಂಟೆ ವಿಸ್ತೀರ್ಣ ಇದೆ. ಸದರಿ ಜಮೀನನ್ನು ನನ್ನ ತಂದೆ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ನನ್ನ ತಾಯಿಗೆ ಆಡೂರಿನಲ್ಲಿ ಸಾಕಷ್ಟು ಜಮೀನುಗಳು ಇವೆ ಎಂದರೆ ಸರಿ. ದಾವಾ ಆಸ್ತಿಯು ನನ್ನ ತಾಯಿಗೆ ಆಕೆಯ ತವರು ಮನೆಯಿಂದ ಬಂದಿರುವ ಆಸ್ತಿ ಅಲ್ಲ ಎಂದರೆ ಸರಿ. ದಾವಾ ಆಸ್ತಿಯನ್ನು ನನ್ನ ತಂದೆ ಸ್ವತಃ ಆದಾಯದಿಂದ ಖರೀದಿ ಮಾಡಿದ ಆಸ್ತಿ ಎಂದರೆ ಸಾಕ್ಷಿಯು ಅವರಿಗೆ ಹಿರೇಬೂದಿಹಾಳ ಗ್ರಾಮದಲ್ಲಿದ್ದ ಪಿತ್ರಾರ್ಜಿತ ಆಸ್ತಿಗಳನ್ನು ಮಾರಾಟ ಮಾಡಿ ಬಂದ ಹಣದಿಂದ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

2. ದಾವಾ ಆಸ್ತಿಯನ್ನು ನನ್ನ ತಂದೆ ಖರೀದಿಸಿದ ಸಂಬಂಧಪಟ್ಟಂತೆ ಆದ ಖರೀದಿ ಪತ್ರದಲ್ಲಿ ಅದನ್ನು ಪಿತ್ರಾರ್ಜಿತ ಆಸ್ತಿಗಳನ್ನು ಮಾರಾಟ ಮಾಡಿ ಬಂದ ಹಣದಿಂದ ಖರೀದಿ ಮಾಡಲಾಗಿದೆ ಎಂದು ನಮೂದುಗಳು ಇರುವುದಿಲ್ಲ. ಪಿತ್ರಾರ್ಜಿತ ಆಸ್ತಿಗಳನ್ನು ನನ್ನ ತಂದೆ ಮಾರಾಟ ಮಾಡಿರುತ್ತಾರೆಂದು ಆಧರಿಸಿರುವ ಖರೀದಿ ಪತ್ರದಲ್ಲಿ ಬೇರೊಂದು ಕಡೆ ಜಮೀನನ್ನು ಖರೀದಿಸುವ ಸಲುವಾಗಿ ಪಿತ್ರಾರ್ಜಿತ ಜಮೀನುಗಳನ್ನು ಮಾರಾಟ ಮಾಡುತ್ತಿದ್ದೇನೆ ಎಂದು ನಮೂದಿಸಿರುತ್ತಾರೋ ಅಥವಾ ಇಲ್ಲವೋ ಗೊತ್ತಿಲ್ಲ. ಸದರಿ

ಖರೀದಿ ಪತ್ರದಲ್ಲಿ ಬೇರೊಂದು ಕಡೆ ಆಸ್ತಿಗಳನ್ನು ಖರೀದಿ ಮಾಡಲು ಪಿತ್ರಾರ್ಜಿತ ಜಮೀನುಗಳನ್ನು ಮಾರಾಟ ಮಾಡುತ್ತಿದ್ದೇನೆ ಎಂದು ನಮೂದು ಇರುವುದಿಲ್ಲ ಎಂದರೆ ಗೊತ್ತಿಲ್ಲ.

3. ನಿ.ಪಿ-2 ರ ಮೃತ್ಯು ಪತ್ರದ ಮೊದಲನೇ ಪುಟದ ಹಿಂಭಾಗದಲ್ಲಿ ಕಂಡು ಬರುವ ಭಾವಚಿತ್ರಗಳು ನನ್ನ ತಂದೆಯ ಭಾವಚಿತ್ರಗಳು ಎಂದರೆ ಸರಿ. ಸದರಿ ಮೃತ್ಯು ಪತ್ರದಲ್ಲಿ ದಾವಾ ಆಸ್ತಿಯು ತನ್ನ ಸ್ವಯಾರ್ಜಿತ ಆಸ್ತಿ ಎಂದು ನನ್ನ ತಂದೆ ನಮೂದಿಸಿರುತ್ತಾರೆ ಎಂದರೆ ಸಾಕ್ಷಿಯು ಅದು ಅವರ ಸ್ವಯಾರ್ಜಿತ ಆಸ್ತಿ ಅಲ್ಲ ಎಂದು ನುಡಿಯುತ್ತಾರೆ. ಚಿಕ್ಕಬೂದಿಹಾಳ ಗ್ರಾಮದಿಂದ ಆಡೂರು ಗ್ರಾಮಕ್ಕೆ ನನ್ನ ತಂದೆ ಯಾವ ವರ್ಷದಲ್ಲಿ ವಲಸೆ ಬಂದಿರುತ್ತಾರೆಂದು ಗೊತ್ತಿಲ್ಲ. ಆಡೂರು ಗ್ರಾಮಕ್ಕೆ ವಲಸೆ ಬಂದಾಗ ನನ್ನ ತಂದೆ ಸ್ವತಃ ದುಡಿಮೆ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಯಾವುದೇ ದುಡಿಮೆ ಮಾಡದೇ ಖಾಲಿ ಕುಳಿತಿದ್ದರು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಅವರು ತನ್ನ ಹೆಂಡತಿಯ ಮನೆಯಲ್ಲಿ ಉಳಿದುಕೊಂಡು ಮಾವನಿಗೆ ಸಂಬಂಧಪಟ್ಟಂತಹ ಜಮೀನಿನ ಕೆಲಸಗಳ ಉಸ್ತುವಾರಿಯನ್ನು ಮಾತ್ರ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ಉಸ್ತುವಾರಿ ಕೆಲಸ ಎಂದರೆ ಆಳುಗಳು ಮಾಡುವ ಕೆಲಸವನ್ನು ನೋಡಿಕೊಳ್ಳುವುದು ಎಂದರೆ ಸರಿ. ಆಳುಗಳು ಬರದೇ ಇದ್ದ ಪಕ್ಷದಲ್ಲಿ ನನ್ನ ತಂದೆಯೇ ವ್ಯವಸಾಯದ ಕೆಲಸವನ್ನು ಮಾಡುತ್ತಿದ್ದರು ಎಂದರೆ ಸರಿ.

4. ನನ್ನ ತಂದೆ ಮಾವನ ಮನೆಯಲ್ಲಿ ಉಳಿದುಕೊಂಡು ಕೆಲಸ ಉಸ್ತುವಾರಿಯನ್ನು ನೋಡಿಕೊಳ್ಳುವುದರ ಜೊತೆಗೆ ಅವರೇ ಕೆಲಸವನ್ನು ಮಾಡಿದ್ದಕ್ಕೆ ಮಾಸಿಕ ಅಥವಾ ವಾರ್ಷಿಕ ಸಂಬಳ ನೀಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಮಾವನ ಮನೆಯಿಂದ ಹೊರಬಂದು ಸ್ವತಂತ್ರವಾಗಿ ಎಷ್ಟು ವರ್ಷಗಳ ಹಿಂದೆ ಜೀವನ ಮಾಡುತ್ತಿದ್ದರು ಎಂದು

ಗೊತ್ತಿಲ್ಲ. ಅವರು ಸ್ವತಂತ್ರ ಜೀವನ ಬಯಸಿ ಹೊರ ಬಂದಾಗ ನಾವು ಚಿಕ್ಕವರು ಇದ್ದೆವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ನನಗೆ ಮತ್ತು ನನ್ನ ಸಹೋದರಿಗೆ ಸುಮಾರು 20 ರ ವಯಸ್ಸು ಇದ್ದಾಗ ಅವರು ಮಾವನ ಮನೆಯಿಂದ ಹೊರ ಬಂದಿರುತ್ತಾರೆಂದು ನುಡಿಯುತ್ತಾರೆ. ನನ್ನ ತಂದೆಯು ಅವರ ಮಾವನ ಮನೆಯಿಂದ ಹೊರ ಬಂದಾಗ ನನಗೆ ತಿಳುವಳಿಕೆ ಬಂದಿರುತ್ತದೆ. ನನ್ನ ತಂದೆಯ ಮಾವನ ಮನೆಯಲ್ಲಿ ನನ್ನ ತಂದೆ ಇದ್ದಾಗ ಅವರ ಮಾವ ಮತ್ತು ಸಹೋದರರ ನಡುವೆ ಜಂಟಿ ಕುಟುಂಬದಲ್ಲಿ ಯಾವ ವ್ಯವಹಾಗಳು ಆಗಿರುತ್ತವೆ ಎಂದು ಗೊತ್ತಿಲ್ಲ. ನನ್ನ ತಂದೆ ಮಾವನ ಮನೆಯಿಂದ ಹೊರ ಬಂದಾಗ ಅವರ ಮಾವ ಜೀವನೋಪಾಯಕ್ಕಾಗಿ ಸಾಕಷ್ಟು ಹಣವನ್ನು ನೀಡಿ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ಅವರು ಮಾವನ ಮನೆಯಲ್ಲಿ ಸಾಕಷ್ಟು ದುಡಿದಿದ್ದ ಕಾರಣಕ್ಕೆ ಸ್ವತಂತ್ರ ಜೀವನಕ್ಕಾಗಿ ನನ್ನ ತಂದೆಗೆ ಹಣವನ್ನು ನೀಡಿದ್ದರು ಎಂದರೆ ಸರಿಯಲ್ಲ.

5. ನನ್ನ ತಂದೆ 2009 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಂದೆ ಮರಣ ಹೊಂದುವ 5-6 ವರ್ಷಗಳ ಪೂರ್ವದಿಂದಲೇ ಕಣ್ಣು ಕಾಣಿಸುತ್ತಿರಲಿಲ್ಲ ಮತ್ತು ಕಿವಿಗಳು ಕೇಳಿಸುತ್ತಿರಲಿಲ್ಲ. ಸದರಿ ಸಮಸ್ಯೆಗಳ ಜೊತೆಗೆ ಅವರಿಗೆ ಅಸ್ತಮಾ ಖಾಯಿಲೆ, ಸಕ್ಕರೆ ಖಾಯಿಲೆ ಮತ್ತು ರಕ್ತದೊತ್ತಡ ಇದ್ದು, ಅವರಿಗೆ ನಡೆದಾಡಲು ಆಗುತ್ತಿರಲಿಲ್ಲ. ನನ್ನ ತಂದೆಯನ್ನು ನಾನು ಹಾಗೂ ಉಳಿದ ಸಹೋದರರು ಸಮನಾಗಿ ಪ್ರೀತಿ ವಾತ್ಸಲ್ಯದಿಂದ ನೋಡಿಕೊಳ್ಳುತ್ತಿದ್ದೆವು ಎಂದರೆ ಸರಿ. ನಿ.ಪಿ-2 ರ ಮೃತ್ಯು ಪತ್ರವನ್ನು ಬರೆದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇತ್ತು ಎಂದರೆ ಸರಿಯಲ್ಲ.

6. ನನ್ನ ತಾಯಿಗೆ ಅವರ ತವರು ಮನೆಯಿಂದ ದೊಡ್ಡ ಪ್ರಮಾಣದಲ್ಲಿ ಜಮೀನುಗಳನ್ನು ನೀಡಿದ್ದರು ಎಂದರೆ ಸರಿ. ನನ್ನ ತಾಯಿಯೇ ಅವರ ಜೀವಿತಾವಧಿಯಲ್ಲಿ ತನ್ನ ಆಸ್ತಿಗಳನ್ನು ಎಲ್ಲಾ ಮಕ್ಕಳಿಗೂ 1992 ರಲ್ಲಿ ವಿಭಾಗ ಮಾಡಿದ್ದರು ಎಂದರೆ

ಸರಿಯಲ್ಲ. ನನ್ನ ತಾಯಿಯು ವಿಭಾಗ ಮಾಡಿಕೊಟ್ಟಿದ್ದನ್ನು ಪ್ರಶ್ನೆ ಮಾಡಿ ಮತ್ತು ಅದರ ರದ್ದತಿಗಾಗಿ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಲಾಗಿತ್ತು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು 7 ನೇ ಪ್ರತಿವಾದಿ ಇದ್ದು, ಆ ದಾವೆಯಲ್ಲಿ ಕೋರಿದ ಪರಿಹಾರಕ್ಕೆ ನಾನು ಸಹ ಸಮ್ಮತಿ ವ್ಯಕ್ತಪಡಿಸಿದ್ದೆ ಎಂದರೆ ಸರಿ. ಸದರಿ ದಾವೆಯಲ್ಲಿ ಈ ದಾವೆಯ ವಾದಿಯು 3 ನೇ ಪ್ರತಿವಾದಿ ಇದ್ದು, ಆತನು ವಿಭಾಗವನ್ನು ರದ್ದು ಮಾಡಲು ಸಮ್ಮತಿಯನ್ನು ನೀಡಿರುವುದಿಲ್ಲ ಎಂದರೆ ಸರಿ. ನನ್ನ ತಾಯಿಯು ಮಾಡಿದ್ದ ವಿಭಾಗದಲ್ಲಿ ಎಲ್ಲರಿಗೂ ಸಮನಾಗಿ ಹಂಚಿಕೆ ಆಗಿರದೇ ಇದ್ದರಿಂದ ಹಾಗೂ ಹೆಣ್ಣು ಮಕ್ಕಳ ಸಹಿಗಳನ್ನು ಪಡೆಯದೇ ಇದ್ದ ಕಾರಣಕ್ಕೆ ಕಾನೂನುಬದ್ದವಾಗಿ ಹಿಸ್ಸೆ ಆಗಿರದ ಕಾರಣಕ್ಕೆ ದಾವೆಯನ್ನು ಸಲ್ಲಿಸಲಾಗಿತ್ತು.

7. ನನ್ನ ತಾಯಿಯು ಸ್ವಂತ ಆಸ್ತಿಗಳನ್ನು ವಿಭಾಗ ಮಾಡಿಕೊಟ್ಟಿದ್ದರಿಂದ, ಸದರಿ ವಿಭಾಗವು ಆಕೆಯ ವಿವೇಚನೆಗೆ ಬಿಟ್ಟಿದ್ದಾಗಿತ್ತು ಎಂದರೆ ಸರಿಯಲ್ಲ. ನನ್ನ ತಾಯಿಯು ಒಳ್ಳೇಯ ದೃಷ್ಟಿಕೋನ ಇಟ್ಟುಕೊಂಡು ಆಕೆಯ ಆಸ್ತಿಗಳನ್ನು ಎಲ್ಲರಿಗೂ ಹಿಸ್ಸೇ ಮಾಡಿಕೊಟ್ಟಿದ್ದು, ಹಿಸ್ಸೇ ಮಾಡಿಕೊಡುವಾಗ ಜಮೀನುಗಳ ಫಲವತ್ತತೆ ಮತ್ತು ನೀರಾವರಿ ಸೌಲಭ್ಯವನ್ನು ಗಮನದಲ್ಲಿಟ್ಟುಕೊಂಡು ಹಂಚಿಕೆ ಮಾಡಲಾಗಿತ್ತು ಎಂದರೆ ಸರಿಯಲ್ಲ. ನನ್ನ ತಾಯಿಯು 1992 ರಲ್ಲಿ ಮಾಡಿಕೊಟ್ಟಿದ್ದ ವಿಭಾಗದಂತೆ ಎಲ್ಲರೂ ತಮ್ಮ ತಮ್ಮ ಹಿಸ್ಸೇಗೆ ಬಂದ ಆಸ್ತಿಗಳನ್ನು 2018 ರವರೆಗೂ ಎಲ್ಲರೂ ವಹಿವಾಟು ಮಾಡುತ್ತಿದ್ದೇವೆ ಎಂದರೆ ಸಾಕ್ಷಿಯು ಇಂದಿಗೂ ಸಹ ಒಟ್ಟಿಗೆ ವಹಿವಾಟು ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ಸದರಿ ವಿಭಾಗದಂತೆ ಹಂಚಿಕೆಯಾದ ಆಸ್ತಿಗಳಿಗೆ ಅವರವರ ಹೆಸರಿಗೆ ಪ್ರತ್ಯೇಕ ಕಂದಾಯ ದಾಖಲಾತಿಗಳು ಆಗಿರುತ್ತವೆ ಎಂದರೆ ಸಾಕ್ಷಿಯು ಅವುಗಳನ್ನು ಮೋಸದಿಂದ ಸೃಷ್ಟಿಸಲಾಗಿದೆ ಎಂದು ನುಡಿಯುತ್ತಾರೆ. 1992 ರಿಂದಲೇ ಸದರಿ ದಾಖಲೆಗಳನ್ನು ಈ ದಾವೆಯ ವಾದಿಯು ಮೋಸದಿಂದ ಬದಲಾಯಿಸಿರುತ್ತಾನೆ. ಸದರಿ

ದಾಖಲೆಗಳು ಅಧಿಕೃತವಾಗಿ ವಿಭಾಗದಂತೆ ಬಂದಿದ್ದು, ವಾದಿಯು ಮೋಸದಿಂದ ಬದಲಾಯಿಸಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ವಾದಿಯು 1992 ರಲ್ಲಿ ಇನ್ನೂ ಓದುತ್ತಿದ್ದ ಕಾರಣಕ್ಕೆ ಆತನಿಗೆ ವ್ಯವಹಾರಿಕ ಜ್ಞಾನವು ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಾದಿಯು ಕಾನೂನು ಪದವಿಯನ್ನು ಓದಿರುತ್ತಾನೆ ಎಂದು ನುಡಿಯುತ್ತಾರೆ. 1992 ರಲ್ಲಿ ವಾದಿಯು ಪಥಮ ಪಿ ಯುಸಿ ಅಥವಾ ದ್ವಿತೀಯ ಪಿ ಯು ಸಿ ಓದುತ್ತಿದ್ದನು. 1992 ರಲ್ಲಿ ಆತನಿಗೆ 18 ವರ್ಷಗಳು ಆಗಿರಲಿಲ್ಲ ಎಂದರೆ ಸರಿ. ಆತನು 1992 ರಲ್ಲಿ ಅಪ್ರಾಪ್ತ ವಯಸ್ಕನು ಇದ್ದ ಕಾರಣಕ್ಕೆ ಡ ಸಂಃ6655 ಮಂಜೂರಿಯಲ್ಲಿ ಆದ ಆತನ ಹಸ್ತಕ್ಷೇಪ ಇರುವುದಿಲ್ಲ ಮತ್ತು ಅದನ್ನು ಸಂಪೂರ್ಣವಾಗಿ ನನ್ನ ತಾಯಿಯೇ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ವಾದಿಯು ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿದ ನಂತರ ಅಲ್ಪಸ್ವಲ್ಪ ರಾಜಕಾರಣ ಮಾಡುತ್ತಿದ್ದಾನೆ ಎಂದರೆ ಸರಿ. ರಾಜಕಾರಣದ ಸಂದರ್ಭದಲ್ಲಿ ಆತನಿಗೆ ನಾನು ಮತ್ತು ಇತರ ಸಹೋದರರು ಬೆಂಬಲಿಸುತ್ತಿದ್ದೆವು ಎಂದರೆ ಸರಿ. ಸಾಕ್ಷಿ ಮುಂದುವರೆದು ಆತನು ನನಗೆ ಮೋಸ ಮಾಡಲು ಪ್ರಾರಂಭಿಸಿದ ನಂತರ ಬೆಂಬಲವನ್ನು ನಿಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ.

9. ವಾದಿಯು ನನ್ನ ತಾಯಿಯ ಜಮೀನಿಗೆ ಸಂಬಂಧಿಸಿದಂತೆ, ದಾವಾ ಆಸ್ತಿಗೆ ಸಂಬಂಧಿಸಿದಂತೆ ಮತ್ತು ಇತರ ವಿಷಯಗಳಲ್ಲೂ ಸಹೋದರರಿಗೆ ಮತ್ತು ಹೆಣ್ಣು ಮಕ್ಕಳಿಗೆ ಮೋಸ ಮಾಡಿರುತ್ತಾನೆ. ವಾದಿಯು 25 ವರ್ಷಗಳ ಹಿಂದಿನಿಂದಲೂ ಪಂಚಾಯಿತಿ ಸದಸ್ಯನಿದ್ದು, ಈಗಲೂ ಸಹ ಸದಸ್ಯನಿದ್ದಾನೆ ಎಂದರೆ ಸರಿ. ನನ್ನ ತಾಯಿಯೇ ಸ್ವತಃ ಹಿಸ್ಸೇಯನ್ನು ಮಾಡಿಕೊಟ್ಟಿದ್ದು, ಸದರಿ ಹಿಸ್ಸೇಯಲ್ಲಿ ವಾದಿಯ ಹಸ್ತಕ್ಷೇಪ ಇಲ್ಲ ಹಾಗೂ ಆತ ಮೋಸ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

10. ನನ್ನ ಸಹೋದರ 5 ನೇ ಪ್ರತಿವಾದಿಯು ಬೆಂಗಳೂರಿನಲ್ಲಿ ವಾಸವಿದ್ದಾನೆ. 5 ನೇ ಪ್ರತಿವಾದಿಯ ಚಿತಾವಣೆಯಿಂದ ನನ್ನ ತಾಯಿ ಮಾಡಿಕೊಟ್ಟಿದ್ದ ವಿಭಾಗವನ್ನು ರದ್ದುಪಡಿಸಲು ದಾವೆಯನ್ನು ಸಲ್ಲಿಸಲಾಗಿತ್ತು ಎಂದರೆ ಸಾಕ್ಷಿಯು ನನ್ನ ತಾಯಿಯ ಮಾತುಗಳಂತೆ ಸಹ ಸದರಿ ದಾವೆಯನ್ನು ಸಲ್ಲಿಸಲಾಗಿತ್ತು ಎಂದು ನುಡಿಯುತ್ತಾರೆ. ವಾದಿಯು ಜೀವನದಲ್ಲಿ ಬೆಳೆದಿರುವುದನ್ನು ಸಹಿಸದೇ ಆತನಿಗೆ ತೊಂದರೆ ಕೊಡುವ ದುರುದ್ದೇಶದಿಂದ ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಆಗಿರುವುದರಿಂದ ಅದನ್ನು ತಮ್ಮ ಸ್ವಇಚ್ಚೆಯಂತೆ ವಾದಿಗೆ ನೋಂದಾಯಿತ ಮೃತ್ಯು ಪತ್ರದ ಮೂಲಕ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸ ನಂಃ 150/ಎ/1 ರಲ್ಲಿ ಒಟ್ಟು ವಿಸ್ತೀರ್ಣ 4 ಎಕರೆ 2 ಗುಂಟಯ ಪೈಕಿ ದಾವಾ ಆಸ್ತಿಯನ್ನು ಹೊರತುಪಡಿಸಿ ಉಳಿಕೆ ದಕ್ಷಿಣ ಭಾಗದ 2 ಎಕರೆ ಜಮೀನನ್ನು ನನಗೆ ಮೃತ್ಯು ಪತ್ರದ ಮೂಲಕವೇ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮೃತ್ಯು ಪತ್ರಕ್ಕೆ ನನ್ನ ತಂದೆಯು ಮರಣ ಹೊಂದಿದ ನಂತರ ಉತ್ತರ ಕ್ರಿಯಾದಿಗಳು ಆಗುವ ಸಮಯದಲ್ಲಿ ಎಲ್ಲಾ ಸಹೋದರರು ಮತ್ತು ಸಹೋದರಿಯರು ಒಪ್ಪಿಗೆ ಸೂಚಿಸಿದ್ದೆವು ಎಂದರೆ ಸರಿಯಲ್ಲ.

11. ದಾವಾ ಆಸ್ತಿಯು ಆಡೂರು ಗ್ರಾಮಕ್ಕೆ ಹೊಂದಿಕೊಂಡಂತೆ ಇದ್ದು, ಅದನ್ನು ಪ್ಲಾಟುಗಳಾಗಿ ಬದಲಾಯಿಸಿ ಮಾರಾಟ ಮಾಡುವ ಜಮೀನಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಕಾರಣಕ್ಕೆ ದಾವಾ ಆಸ್ತಿಯ ಬೆಲೆಯು ಅತೀ ಹೆಚ್ಚು ಇರುವುದರಿಂದ ಅದನ್ನು ಹೇಗಾದರೂ ಪಡೆದರೆ ಲಾಭವಾಗುತ್ತದೆ ಎಂದು ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಮೃತ್ಯು ಪತ್ರದಂತೆ ವಾದಿಗೆ ಸಲ್ಲಬಾರದೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು 2010 ರಿಂದಲೂ ವಾದಿಯು ಮೃತ್ಯು ಪತ್ರದ ಆಧಾರದಂತೆ ಮತ್ತು ನಮ್ಮ ಒಪ್ಪಿಗೆಯಂತೆ

ಇಂದಿಗೂ ಆತನ ಕಬ್ಜಾ ಮತ್ತು ವಹಿವಾಟಿನಲ್ಲಿದೆ ಎಂದರೆ ಸರಿಯಲ್ಲ. ಎಲ್ಲರೂ ಸಾಮೂಹಿಕ ವಹಿವಾಟಿಲ್ಲಿದ್ದೇವೆ ಎಂದು ನುಡಿಯುತ್ತಾರೆ.

**ಮರು ವಿಚಾರಣೆಃಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

SD/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ